# <u>ನೋಡಿರಯ್ಯ ಹನುಮಂತನ ಮಹಿಮೆಯ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 360.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 149.
3. **Note:** Lyrics in the above reference books are same. Singer has followed these wordings.
4. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.

ರಾಗ: ಶಂಕರಾಭರಣ ತಾಳ: ಚಾಪು

ನೋಡಿರಯ್ಯ ಹನುಮಂತನ ಮಹಿಮೆಯ
ಬೇಡಿರೋ ವರಗಳನು ‖ ಪ ‖

ರೂಢಿಯೊಳು ಇವನನ್ನು ಪಾಡಿ ಪೊಗಳುತಿಪ್ಪ ಜನರ
ನೋಡಿ ನೋಡಿ ವರವನೀವ ಗಾಡಿಗಾರ ಹನುಮನ್ನ ‖ ಅಪ ‖

ಅಂದು ದಶರಥ ಸುತನಾಗಿ ಬಂದು ನಿಂದು ಸಾಕೇತದಿ
ಚಂದದಿಂದಿಪ್ಪನೆಂದು ಅಂದದಿಂ ವಿಶ್ವಾಮಿತ್ರ
ತಂದು ರಘುರಾಮನಿಗೊರೆಯಲಂದು ಯಾಗವ ಕಾಯ್ದ
ಸುಂದರ ರಾಮನಿಗೆ ವಂದನೆಗೈವನೀತ ‖ ೧ ‖

ಧೀರನಾಗಿ ಧನುವ ಮುರಿದು ಮೆರೆದು ದಂಡಕವ
ಸೇರಿ ಘೋರ ರಕ್ಕಸರ ಸದೆದು ಜರಿದು ತಂದು ಕಪಿಪತಿಯೊಡನೆ
ಸೇರಿ ಸಖ್ಯವನ್ನೆ ಮಾಡಿ ಧಾರಿಣಿಯೊಳಗೆ ಕಡು
ನಾರಿಯನ್ನೆ ಹುಡುಕಿಸಿದ ಧೀರ ರಾಮದೂತನೀತ ‖ ೨ ‖

ಖ್ಯಾತಿಯಿಂದ ಸೇತುವೆಯನು ಕಟ್ಟಿ ಮೆಟ್ಟಿ ರಾವಣ ಪಡೆಯ
ಭೂತಳದೊಳು ಕೆಡಹಿಬಿಟ್ಟು ಮಹಾಂತದೊಳು
ಈತನೆಂದು ಸೇರಿ ಬಂದು ವಾತತನುಜನೆಮ್ಮ ಬಹು
ಪ್ರೀತಿಯಿಂದ ಪುರಂದರ ವಿಠಲನ್ನ ದಾಸನಾದ || ೨ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಈ ಪದದಲ್ಲಿ ರಾಮಾಯಣದ ಕತೆ ಸಂಗ್ರಹವಾಗಿ ಬಂದಿದೆ.

**ಗಾಡಿಕಾರ** – ಉಪಾಯವಂತ, ಜಾದೂಗಾರ; ಗಾರುಡಿಗಾರ; ಚೆಲುವ.

**ಧನುವ** – ಸೀತಾಪರಿಣಯಕ್ಕೆ ವೀರ್ಯಶುಲ್ಕವಾಗಿ ಇರಿಸಿದ್ದ ಶಿವಧನುಸ್ಸನ್ನು.

**ಮೆರೆದು** – ಸೀತೆಯನ್ನು ಮದುವೆಯಾಗಿ.

**ಸದೆದು** – ಸದೆಬಡಿದು.

**ಕಪಿಪತಿಯೊಡನೆ** – ಸುಗ್ರೀವನೊಡನೆ.

**ಭೂತಳದೊಳು ಕೆಡಹಿಬಿಟ್ಟು** – ಯುದ್ಧದಲ್ಲಿ ರಾವಣನ ಸೇನೆಯನ್ನು ಮಣ್ಣುಗೂಡಿಸಿ.

**ಮಹಾಂತದೊಳು** – ಕಲ್ಪಾಂತದಲ್ಲಿ.

**Classification:** Keerthane
**Ankita:** purandara vittala
**Location:** NA
**Category:** Hanuma Stuti
**Sub-Category:** hanuma, jana, Dasharatha, rama, muni, yagna, asura, bhumi, ravana, priti,
**Pravachana:** NA
**Explanation:** NA